(ಇಂದು ದಿಃ 20-09-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಪಾಟಿ ಸವಾಲು ಃ- ಶ್ರೀ. ಡಿ.ಪಿ.ಎಸ್. ರವರಿಂದ ಃ-**

ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನ್ನ ಸ್ವತ್ತು ಇರುತ್ತದೆ. ಸುಮಾರು 100 ಅಡಿ ಅಂತರದಲ್ಲಿ ನನ್ನ ಸ್ವತ್ತು ಇರುತ್ತದೆ. ವಾದಿ ಸರ್ಜಾಪುರದಲ್ಲಿ ಹುಟ್ಟಿ ಬೆಳೆದಿರುತ್ತಾರೆ. ದಾವಾ ಸ್ವತ್ತಿನಲ್ಲಿ ರಾಗಿ ಬೆಳೆ ಇರುತ್ತದೆ. ದಾವಾ ಸ್ವತ್ತನ್ನು ವಾದಿ ತಂದೆ ಯಾವಾಗ ಖರೀದಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು ಕ್ರಯ ಪತ್ರವನ್ನು ನೋಡಿರುವುದಿಲ್ಲ. ವಾದಿ ಮತ್ತು ಸಹೋದರರು ಯಾವಾಗ ಆಸ್ತಿಗಳನ್ನು ಭಾಗ ಮಾಡಿಕೊಂಡರು ಎಂದು ಗೊತ್ತಿಲ್ಲ. ದಾವಾ ಸರ್ವೆ ನಂಬರ್ ಒಟ್ಟು 4 ಎಕರೆ 2 ಗುಂಟೆ ವಿಸ್ತೀರ್ಣ ಇರುತ್ತದೆ. ವಿಭಾಗವು ಯಾರ್ಯಾರ

ನಡುವೆ ಆಗಿರುತ್ತದೆ ಎಂದು ಗೊತ್ತಿಲ್ಲ. ದೊಡ್ಡಪಿಳ್ಳಣ್ಣ ದಾವಾ ಸರ್ವೆ ನಂಬರಿನಲ್ಲಿ 2 ಎಕರೆ ಸ್ವತ್ತನ್ನು ತನ್ನ ಮಗಳಿಗೆ ಕೊಟ್ಟಿರುತ್ತಾರೆ. ದಾವಾ ಸ್ವತ್ತು ವಾದಿಗೆ ಸೇರಿದೆ ಎಂಬುದಕ್ಕೆ ದಾಖಲಾತಿಯನ್ನು ನೋಡಿರುವುದಿಲ್ಲ. 2010 ರಲ್ಲಿ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ಯಾರ ಹೆಸರಿನಲ್ಲಿ ಇದ್ದವು ಎಂದು ಗೊತ್ತಿಲ್ಲ. ದಾವಾ ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣವನ್ನು 13 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಸ್ವತ್ತನ್ನು ಬಿಟ್ಟು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. 2006 ರಲ್ಲಿ ದಾವಾ ಸ್ವತ್ತಿನ ಪೂರ್ಣ ವಿಸ್ತೀರ್ಣವನ್ನು ರವೀಂದ್ರರೆಡ್ಡಿ ಎಂಬುವವರು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 2006 ರಿಂದ 6 ನೇ ಪ್ರತಿವಾದಿ ಮತ್ತು 13 ನೇ ಪ್ರತಿವಾದಿಯೇ ದಾವಾ ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣದಲ್ಲಿ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಂಪೂರ್ಣ ವಿಸ್ತೀರ್ಣದ ಎಲ್ಲಾ ಕಂದಾಯ ದಾಖಲಾತಿಗಳು 13 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಯಾವುದೇ ಸ್ವಾದೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸೀನಿಯರ್ ಸಿ.ಜೆ., ಆನೇಕಲ್.

(ಇಂದು ದಿಃ 20-09-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋದಿಸಲಾಯಿತು)

**ಪಾಟಿ ಸವಾಲು ಃ- ಶ್ರೀ. ಡಿ.ಪಿ.ಎಸ್. ರವರಿಂದ ಃ-**

ವಾದಿಗೆ 3 ಜನ ಮಕ್ಕಳು. ವಾದಿ ತಂದೆಗೆ 3 ಜನ ಹೆಣ್ಣು ಮಕ್ಕಳು 5 ಜನ ಗಂಡು ಮಕ್ಕಳು. ದಾವಾ ಸರ್ವೆ ನಂಬರಿನಲ್ಲಿ 1 ಎಕರೆ 14 ಗುಂಟೆಯನ್ನು ವಾದಿ ತಂದೆ ಖರೀದಿ ಮಾಡಿರುತ್ತಾರೆ. ಯಾವ ವರ್ಷ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಕ್ರಯ ಪತ್ರವನ್ನು ನೋಡಿಲ್ಲ. ವಾದಿ ಮತ್ತು ಪಿಳ್ಳಣ್ಣ ಎಂಬುವವರು ಸ್ವತ್ತುಗಳನ್ನು ಭಾಗ ಮಾಡಿಕೊಂಡಿರುತ್ತಾರೆ. ಬರವಣಿಗೆ ಮೂಲಕ ಭಾಗ ಮಾಡಿಕೊಂಡಿರುತ್ತಾರೆ. ನಾನು ಭಾಗ ಪಟ್ಟಿಯನ್ನು ನೋಡಿರುತ್ತೇನೆ. ವಾದಿಗೆ ಸರ್ವೆ ನಂ. 328, 311, 365, 78 ಸ್ವತ್ತುಗಳಲ್ಲಿ ಭಾಗಾಂಶ ನೀಡಲಾಗಿದೆ. ದಾವಾ ಹಾಕುವ ಸಮಯದಲ್ಲಿ ದಾವಾ ಸ್ವತ್ತಿನ ಸಂಬಂಧ ವಾದಿ

ಹೆಸರಿನಲ್ಲಿ ದಾಖಲಾತಿ ಇರುವುದಿಲ್ಲ. ವಾದಿ ಹೆಸರಿನಲ್ಲಿರುವ ಕಂದಾಯ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. 2006 ರಲ್ಲಿ ದಾವಾ ಸ್ವತ್ತನ್ನು ಸೇರಿದಂತೆ ಪೂರ್ಣ ವಿಸ್ತೀರ್ಣವನ್ನು 6 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2006 ರಿಂದಲೇ ಪೂರ್ಣ ವಿಸ್ತೀರ್ಣದಲ್ಲಿ 6 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದರು ಎಂದರೆ ಸರಿಯಲ್ಲ. 2006 ರಿಂದಲೂ 6 ಮತ್ತು 13 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 13 ನೇ ಪ್ರತಿವಾದಿ ದಾವಾ ಸ್ವತ್ತನ್ನು ಸೇರಿದಂತೆ ಸುಮಾರು 480 ಎಕರೆಗೆ ಕಾಂಪೊಂಡ್ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. 2006 ರಿಂದ ವಾದಿ ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸೀನಿಯರ್ ಸಿ.ಜೆ., ಆನೇಕಲ್.